# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ,
## ಬೆಂಗಳೂರು 560 001.

ಅಧಿಸೂಚನೆ ಸಂಖ್ಯೆ ಕ.ವಿ.ನಿ.ಆ/ಡಿ/13/14-15, ದಿನಾಂಕ ಆಗಸ್ಟ್ 25, 2014, ಬೆಂಗಳೂರು.

2006ರ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಲೈಸೆನ್ಸುದಾರರ ವಿದ್ಯುತ್ ಸರಬರಾಜು ಷರತ್ತುಗಳ ಹಲವು ಖಂಡಗಳಿಗೆ ಮೂರನೆಯ ತಿದ್ದುಪಡಿ.

<u>ಪೀಠಿಕೆ:</u>

ಕರ್ನಾಟಕ ರಾಜ್ಯದಲ್ಲಿನ ವಿತರಣಾ ಲೈಸೆನ್ಸುದಾರರ ವಿದ್ಯುತ್ ಸರಬರಾಜು ಷರತ್ತುಗಳನ್ನು 2006ರ 17ನೇ ಜೂನ್‌ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿಸಲಾಗಿತ್ತು. ತದನಂತರ, ಒಂದನೇ ಮತ್ತು ಎರಡನೇ ತಿದ್ದುಪಡಿಗಳನ್ನು ಅನುಕ್ರಮವಾಗಿ ದಿನಾಂಕ: 20.08.2008 ಮತ್ತು 22.07.2010ರಂದು ಅಧಿಸೂಚಿಸಲಾಗಿತ್ತು.

ಬೆ.ವಿ.ಕಂ, ಗು.ವಿ.ಕಂ ಮತ್ತು ಗ್ರಾಹಕರು, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಲೈಸೆನ್ಸುದಾರರ ವಿದ್ಯುತ್ ಸರಬರಾಜು ಷರತ್ತುಗಳ ಕೆಲವು ಖಂಡಗಳನ್ನು ಅನುಷ್ಠಾನಗಳಿಸುವಲ್ಲಿ ಇರುವ ಕೆಲವು ತೊಂದರೆಗಳನ್ನು ಎದುರಿಸಲಾಗುತ್ತಿದೆ ಎಂದು ಆಯೋಗಕ್ಕೆ ಮನವಿ ಸಲ್ಲಿಸಿ ಸದರಿ ಷರತ್ತುಗಳ ಹಲವು ಖಂಡಗಳಿಗೆ ತಿದ್ದುಪಡಿ ತರುವಂತೆ ಕೋರಿದ್ದವು. ಮುಂದುವರಿದು, ದಿನಾಂಕ: 30.04.2012ರ ದರಾದೇಶದ ಪ್ರಕಾರ ಹೆಚ್.ಟಿ. 2(ಎ) ಮತ್ತು ಹೆಚ್.ಟಿ. 2(ಬಿ)ಸ್ಥಾಪನಗಳಿಗೆ ದಿನದ ಸಮಯಾಧರಿತ (ಟಿ.ಒ.ಡಿ.) ದರವನ್ನು ಅನುಷ್ಠಾನಗೊಳಿಸುವುದು ಕಡ್ಡಾಯಗೊಳಿಸಿದ್ದರಿಂದ, ಇದನ್ನು ಸದರಿ ಷರತ್ತುಗಳಲ್ಲಿ ಅಳವಡಿಸುವುದು ಅವಶ್ಯವಿರುತ್ತದೆ.

ಸದರಿ ಷರತ್ತುಗಳಿಗೆ ಕರಡು ತಿದ್ದುಪಡಿಗಳನ್ನು ಅಧಿಸೂಚನೆ ಸಂಖ್ಯೆ: ಕ.ವಿ.ನಿ.ಆ./ಸಿಒಎಸ್/ಡಿ/13/13-14, ಬೆಂಗಳೂರು, ದಿನಾಂಕ: 20.02.2014ರಲ್ಲಿ ಪ್ರಕಟಿಸಿ, ಭಾಗೀದಾರರಿಂದ ಆಕ್ಷೇಪಣೆ / ಸಲಹೆ / ಅಭಿಪ್ರಾಯಗಳನ್ನು ಆಹ್ವಾನಿಸಲಾಗಿತ್ತು. ಸದರಿ ಕರಡು ತಿದ್ದುಪಡಿಗಳನ್ನು ಆಯೋಗದ ಅಂತರ್ಜಾಲ ತಾಣ: <u>www.karnataka.gov.in/kerc</u>ನಲ್ಲಿ ಪ್ರಕಟಿಸಿ ಮತ್ತು ಸಾರ್ವಜನಿಕ/ ಆಸಕ್ತ ವ್ಯಕ್ತಿಗಳ ಮಾಹಿತಿಗಾಗಿ ದಿನಪತ್ರಿಕೆಗಳಲ್ಲಿಯೂ ಸಹಾ ಪ್ರಕಟಿಸಲಾಗಿತ್ತು. ಆಯೋಗವು, ಬೆ.ವಿ.ಕಂ, ಮತ್ತು ಚಾ.ವಿ.ಸ.ನಿ.ನಿ.ಯೂ ಸೇರಿದಂತೆ ಭಾಗೀದಾರರಿಂದ ಅಭಿಪ್ರಾಯಗಳನ್ನು ಸ್ವೀಕರಿಸಿದ ಆಯೋಗವು, ದಿನಾಂಕ: 04.07.2014ರಂದು ಈ ವಿಷಯದಲ್ಲಿ 'ಸಾರ್ವಜನಿಕ ವಿಚಾರಣೆ'ಯನ್ನು ಸಹಾ ನಡೆಸಿದೆ. ಇದಲ್ಲದೆ, ಆಯೋಗವು, ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಜೊತೆ ಈ ವಿಷಯವನ್ನು ದಿನಾಂಕ: 14.07.2014ರಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದೆ. ಆಯೋಗವು, ಭಾಗೀದಾರರ ಅಭಿಪ್ರಾಯ / ಸಲಹೆಗಳನ್ನು ಪರಿಗಣಿಸಿದ ನಂತರ ತಿದ್ದುಪಡಿಗಳನ್ನು ಅಂತಿಮಗೊಳಿಸಿದೆ.

ಈಗ, ಆದ್ದರಿಂದ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು 2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 16ರ ಜೊತೆಗೆ ಓದಲಾದ 2004ರ ಕ.ವಿ.ನಿ.ಆ. (ವಿದ್ಯುತ್ ಸರಬರಾಜು ಕಂಪನಿಗಳಿಗೆ ಲೈಸೆನ್ಸಿನ ಷರತ್ತುಗಳು) ವಿನಿಯಮಗಳ 7.3ನೇ ಷರತ್ತರಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರ ಮತ್ತು ಈ ಸಂಬಂಧ ಸಕ್ರಿಯಗೊಳಿಸುವ ಎಲ್ಲಾ ಅಧಿಕಾರವನ್ನು ಚಲಾಯಿಸಿ 2006ರ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಲೈಸೆನ್ಸುದಾರರ ವಿದ್ಯುತ್ ಸರಬರಾಜು ಷರತ್ತುಗಳ ಈ ಮುಂದಿನ ಖಂಡಗಳಿಗೆ ತಿದ್ದುಪಡಿಗಳನ್ನು ಮಾಡುತ್ತಿದೆ:

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:**

   ಎ) ಇದನ್ನು 2006ರ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಲೈಸೆನ್ಸುದಾರರ ವಿದ್ಯುತ್ ಸರಬರಾಜು ಷರತ್ತುಗಳ, ಹಲವು ಖಂಡಗಳಿಗೆ ಮೂರನೆಯ ತಿದ್ದುಪಡಿ ಎಂದು ಕರೆಯಬಹುದಾಗಿದೆ.

   ಬಿ) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

   ಸಿ) ಇದು 2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇಧ 14ರಡಿಯಲ್ಲಿ ವಿದ್ಯುಚ್ಛಕ್ತಿ ವ್ಯವಹಾರದಲ್ಲಿ ತೊಡಗಿರುವ ಎಲ್ಲಾ ಲೈಸೆನ್ಸುದಾರರಿಗೆ ಮತ್ತು ವಿದ್ಯುತ್ ಗ್ರಾಹಕರಿಗೆ ಅನ್ವಯವಾಗುತ್ತದೆ.

   ಡಿ) ಈ ಷರತ್ತುಗಳು ಕರ್ನಾಟಕ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರುತ್ತದೆ.

2. ಕೆಳಗಿನ ಕೋಷ್ಟಕದ ಕಲಮು 2ರಲ್ಲಿರುವ ಹಾಲಿ ಖಂಡವನ್ನು ಕಲಮು 3ರಲ್ಲಿರುವ ಖಂಡದಂತೆ ಪ್ರತಿಸ್ಥಾಪಿಸಲಾಗಿದೆ:

| 1 | 2 | 3 |
|---|---|---|
| ಖಂಡ | ಹಾಲಿಯಿರುವ ಷರತ್ತು | ತಿದ್ದುಪಡಿಯಾದ ಷರತ್ತು |
| 4.03 (iv) | ಅಂದಾಜು ಪಟ್ಟಿ ಮತ್ತು ವಿದ್ಯುತ್ ಮಂಜೂರಾತಿ:<br>ಅರ್ಜಿದಾರನು, ಖಂಡ 4.03 **(iv)** ನಲ್ಲಿದ್ದಂತೆ ಅವಶ್ಯಕತೆಗಳನ್ನು ಸೂಚಿತ ಸಮಯದೊಳಗೆ ಪಾಲಿಸದೆ ಮತ್ತು ವಿದ್ಯುತ್ ಸರಬರಾಜನ್ನು ಪಡೆದುಕೊಳ್ಳಲು ಸಿದ್ಧನಿಲ್ಲವಾದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಿದೆ ಎಂದು ಪರಿಗಣಿಸಲಾಗುವುದು ಮತ್ತು ಲೈಸೆನ್ಸುದಾರನು, ವಿದ್ಯುತ್ ಸರಬರಾಜು ಪೂರೈಸಲಾಗದ್ದಕ್ಕೆ ದಂಡ ಕಟ್ಟುವ ಜವಾಬ್ದಾರಿಯಿಂದ ಮುಕ್ತನಾಗುತ್ತಾನೆ. ಸಂದಾಯ ಮಾಡಿದ ನೋಂದಣಿ ಮತ್ತು ಪ್ರಕ್ರಿಯೆ ಶುಲ್ಕ ಕಳೆದುಕೊಂಡಂತೆ ಆಗುವುದು. ಈ 4.03 ಷರತ್ತಿನಲ್ಲಿರುವ ಉಪಬಂಧಗಳನ್ನು ವಿದ್ಯುತ್ ಮಂಜೂರಾತಿ ಪತ್ರದಲ್ಲಿ ಸ್ಪಷ್ಟವಾಗಿ ಹಾಕಬೇಕಿದೆ. ಆದರೆ, ಅರ್ಜಿದಾರನು, ವಿದ್ಯುತ್ ಮಂಜೂರಾತಿಯ ಅವಧಿ ಮುಕ್ತಾಯವಾಗುವ ಮುನ್ನ ವಿದ್ಯುತ್ ಮಂಜೂರಾತಿ ನವೀಕರಣಕ್ಕೆ ಕೋರಿಕೆ ಸಲ್ಲಿಸಿದಾಗ, ಖಂಡ 30.01ರಲ್ಲಿ ಸೂಚಿಸಿದಂತೆ ಮರುನೋಂದಣಿ ಶುಲ್ಕ ಸಂದಾಯ ಮಾಡುವುದಕ್ಕೆ ಒಳಪಟ್ಟು, ವಿದ್ಯುತ್ ಮಂಜೂರಾತಿಯನ್ನು ಒಂದು ಸಲಕ್ಕೆ ಮೀರದಂತೆ ನವೀಕರಿಸಬಹುದು ಮತ್ತು ಲೈಸೆನ್ಸುದಾರನು, ಅಂತಹ ನವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ವಿದ್ಯುತ್ ಸರಬರಾಜು ಮಾಡತಕ್ಕದ್ದು. ಅರ್ಜಿದಾರನು ಈ ಅವಧಿಯಲ್ಲಿ ವಿದ್ಯುತ್ ಸರಬರಾಜು ಪಡೆದುಕೊಳ್ಳಲು ವಿಫಲನಾದಲ್ಲಿ, ಅರ್ಜಿಯನ್ನು ತಿರಸ್ಕರಿಸಿದೆ ಎಂದು ಪರಿಗಣಿಸಲಾಗುವುದು. | ಅಂದಾಜು ಪಟ್ಟಿ ಮತ್ತು ವಿದ್ಯುತ್ ಮಂಜೂರಾತಿ:<br>ಖಂಡ 4.03 **(iv)**ರಲ್ಲಿ ನಿಗದಿಯಾದ ಅವಶ್ಯಕತೆಗಳನ್ನು, ಕರ್ನಾಟಕ ಸರ್ಕಾರದ ಯೋಜನೆಗಳಡಿಯಲ್ಲಿ ಬರುವ ಬೀದಿದೀಪ, ನೀರು ಸರಬರಾಜು ಮತ್ತು ನೀರಾವರಿ ಪಂಪುಸೆಟ್ಟುಗಳ ಸ್ಥಾಪನಗಳ ಸಂಬಂಧದಲ್ಲಿ 180 ದಿನಗಳೊಳಗೆ ಮತ್ತು ಇತರೆ ಎಲ್ಲಾ ಪ್ರವರ್ಗಗಳ ಸ್ಥಾಪನಗಳ ಸಂಬಂಧದಲ್ಲಿ 90 ದಿನಗಳೊಳಗೆ ಪಾಲಿಸದಿದ್ದಲ್ಲಿ, ಅಂತಹ ಅರ್ಜಿಯನ್ನು ತಿರಸ್ಕರಿಸಿದೆ ಎಂದು ಪರಿಗಣಿಸಲಾಗುತ್ತದೆ. ಆದರೆ, ಅರ್ಜಿದಾರನು, ಮೇಲೆ ಹೇಳಿದ ಅವಧಿ ಮುಕ್ತಾಯಕ್ಕೆ ಮುನ್ನ ಸದರಿ ಅವಶ್ಯಕತೆಗಳನ್ನು ಪಾಲಿಸಲು 180 ದಿನಗಳು ಅಥವಾ 90 ದಿನಗಳು ಮೀರದ, ಯಾವುದು ಅನ್ವಯವಾಗುವುದೋ ಅದು, ಸಮಯ ವಿಸ್ತರಣೆ ಕೋರಿದಲ್ಲಿ, ಖಂಡ 30.01ರಲ್ಲಿ ಸೂಚಿಸಿದಂತೆ ಮರುನೋಂದಣಿ ಮತ್ತು ಪರಿಶೀಲನಾ ಶುಲ್ಕ ಪಾವತಿ ಮಾಡುವ ಷರತ್ತಿಗೊಳಪಟ್ಟು ಅಂತಹ ಅರ್ಜಿಯನ್ನು ಒಂದು ಬಾರಿಗೆ ವಿಸ್ತರಿಸಲಾಗುತ್ತದೆ. ಅರ್ಜಿದಾರನು, ಈ ರೀತಿ ವಿಸ್ತರಿಸಿದ ಅವಧಿಯೊಳಗೆ ಮೇಲ್ಕಂಡ ಅವಶ್ಯಕತೆಗಳನ್ನು ಪಾಲಿಸದಿದ್ದಲ್ಲಿ, ಅಂತಹ ಅರ್ಜಿಯನ್ನು ರದ್ದಾಗಿದೆ ಎಂದು ಪರಿಗಣಿಸಲಾಗುತ್ತದೆ. ಅರ್ಜಿಯು ರದ್ದಾದ ನಂತರ ನೋಂದಣಿ / ಮರು-ನೋಂದಣಿ ಮತ್ತು ಪರಿಶೀಲನೆ ಶುಲ್ಕಗಳನ್ನು ಮುಟ್ಟುಗೋಲಾದಂತಾಗುತ್ತದೆ. |
| 8.13 | ದಿನದ ಸಮಯಾಧಾರಿತ ದರದ ಪ್ರಯೋಜನವನ್ನು ಯಾವುದೇ ಅರ್ಜಿದಾರ / ಗ್ರಾಹಕ ಅವರ ಆಯ್ಕೆ ಮೇರೆಗೆ ಅರ್ಹ ಪ್ರವರ್ಗಗಳಿಗೆ ವಿಸ್ತರಿಸಬಹುದಾಗಿದೆ. | ದಿನದ ಸಮಯಾಧಾರಿತ ದರದ ಸೌಲಭ್ಯವನ್ನು ಯಾವುದೇ ಅರ್ಜಿದಾರ / ಗ್ರಾಹಕನಿಗೆ ಆಯೋಗವು, ಕಾಲಕಾಲಕ್ಕೆ ಹೊರಡಿಸುವ ಆದೇಶಗಳಲ್ಲಿ ಸೂಚಿಸಿದಂತೆ ವಿಸ್ತರಿಸಬಹುದಾಗಿರುತ್ತದೆ. |
| 9.00 | (ಎ) ಕೋರಿದ ಲೋಡ್ 25 ಕಿ.ವ್ಯಾ. ಅಥವಾ ಹೆಚ್ಚಾಗಿದ್ದಲ್ಲಿ<br>(ಬಿ) ಕಟ್ಟಡದ ನಿರ್ಮಿತ ವಿಸ್ತೀರ್ಣ 500 ಚ.ಮೀ.ಗಿಂತ ಹೆಚ್ಚಾಗಿದ್ದಲ್ಲಿ, ವಾಣಿಜ್ಯ / ಗೃಹ ಕಟ್ಟಡ(ಗಳು) / ಸಂಕೀರ್ಣ(ಗಳು) / ಬಹು ಮಹಡಿ ಕಟ್ಟಡ(ಗಳು) ಇವುಗಳಿಗೆ ಅನ್ವಯವಾಗುತ್ತದೆ. | (ಎ) ಕೋರಿದ ಲೋಡ್ 35 ಕಿ.ವ್ಯಾ. ಅಥವಾ ಹೆಚ್ಚಾಗಿದ್ದಲ್ಲಿ<br>(ಬಿ) ಕಟ್ಟಡದ ನಿರ್ಮಿತ ವಿಸ್ತೀರ್ಣ 800 ಚ.ಮೀ.ಗಿಂತ ಹೆಚ್ಚಾಗಿದ್ದಲ್ಲಿ, ವಾಣಿಜ್ಯ / ಗೃಹ ಕಟ್ಟಡ(ಗಳು) / ಸಂಕೀರ್ಣ(ಗಳು) / ಬಹು ಮಹಡಿ ಕಟ್ಟಡ(ಗಳು) ಇವುಗಳಿಗೆ ಅನ್ವಯವಾಗುತ್ತದೆ. |
| 12.04 (ii) b | ಲೈಸೆನ್ಸುದಾರನ ಅಧಿಕಾರಿಗಳು, ವಿಶೇಷ ಸಂದರ್ಭಗಳಲ್ಲಿ ಎಲ್ಲಿ ವೈಯಕ್ತಿಕ ಮನೆಗಳಿಗೆ / ಬಹುಮಹಡಿ ಕಟ್ಟಡಗಳಿಗೆ, ಸಂಕೀರ್ಣಗಳಿಗೆ / ಬಡಾವಣೆ ಮತ್ತು ಇತ್ಯಾದಿಗಳಿಗೆ ಮೂಲಸೌಕರ್ಯ ವ್ಯವಸ್ಥೆಯನ್ನು ಇನ್ನೂ ರಚಿಸಬೇಕಿದೆಯೋ ಅಥವಾ ರಚಿಸುವ ಹಂತದಲ್ಲಿದೆಯೋ ಅಂತಹ ಪ್ರಕರಣಗಳಲ್ಲಿ ಶಾಶ್ವತ ಬಳಕೆಗಾಗಿ ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಮಂಜೂರು ಮಾಡುವ / ವಿಸ್ತರಿಸುವ ಅಧಿಕಾರ ಹೊಂದಿರುತ್ತಾರೆ. ಆದರೆ, ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಸಂಪರ್ಕನೀಡಿದ ದಿನಾಂಕದಿಂದ ಎರಡು ವರ್ಷ ಮೀರುವಂತೆ ವಿಸ್ತರಿಸುವಂತಿಲ್ಲ. | ಲೈಸೆನ್ಸುದಾರನ ಅಧಿಕಾರಿಗಳು, ವಿಶೇಷ ಸಂದರ್ಭಗಳಲ್ಲಿ ಎಲ್ಲಿ ವೈಯಕ್ತಿಕ ಮನೆಗಳಿಗೆ / ಬಹುಮಹಡಿ ಕಟ್ಟಡಗಳಿಗೆ, ಸಂಕೀರ್ಣಗಳಿಗೆ / ಬಡಾವಣೆ ಮತ್ತು ಇತ್ಯಾದಿಗಳಿಗೆ ಮೂಲಸೌಕರ್ಯ ವ್ಯವಸ್ಥೆಯನ್ನು ಇನ್ನೂ ರಚಿಸಬೇಕಿದೆಯೋ ಅಥವಾ ರಚಿಸುವ ಹಂತದಲ್ಲಿದೆಯೋ ಅಂತಹ ಪ್ರಕರಣಗಳಲ್ಲಿ ಶಾಶ್ವತ ಬಳಕೆಗಾಗಿ ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಮಂಜೂರು ಮಾಡುವ / ವಿಸ್ತರಿಸುವ ಅಧಿಕಾರ ಹೊಂದಿರುತ್ತಾರೆ. ಆದರೆ, ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಸಂಪರ್ಕನೀಡಿದ ದಿನಾಂಕದಿಂದ ಎರಡು ವರ್ಷ ಮೀರುವಂತೆ ವಿಸ್ತರಿಸುವಂತಿಲ್ಲ.<br><br>ಪರಂತು, 15 ಮೀಟರ್‌ಗಿಂತ ಎತ್ತರವಿರುವ ಬಹುಮಹಡಿ ಕಟ್ಟಡಗಳಿಗೆ ಅಂತಹ ವಿದ್ಯುತ್ ಸರಬರಾಜು ಒದಗಿಸುವ ಮುನ್ನ ವಿದ್ಯುತ್ ಸರಬರಾಜು ಷರತ್ತುಗಳ ಖಂಡ 9.12ರ ಉಪಬಂಧವನ್ನು ಪಾಲನೆಯಾಗಿರಬೇಕಾಗುತ್ತದೆ. |

*ಆಯೋಗದ ಆದೇಶದ ಮೇರೆಗೆ,*

*ಕ್ಯಾಪ್ಟನ್ ಡಾ. ಕೆ. ರಾಜೇಂದ್ರ*
*ಕಾರ್ಯದರ್ಶಿ*
*ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ*